ಆಗಿಲ್ಲವೆನ್ನತಕ್ಕ ಮಾತನ್ನು ಹೇಳಿ ಕೇಂದ್ರ ಸರ್ಕಾರಕ್ಕೆ ಈಗ ಮನವಿ ಮಾಡಿದ್ದೇವೆ. ಹೆಚ್ಚು ಹಣವನ್ನು ಈ ವರ್ಷ ನಮಗೆ ಕೊಡಬೇಕೆಂದು ಸುಮಾರು 40 ಕೋಟಿ ರೂಪಾಯಿ ಹಣವನ್ನು ಬಿಡುಗಡೆ ಮಾಡಬೇಕೆಂದು ನಾವು ಕೇಳಿದ್ದೇವೆ. ಮಾನ್ಯ ಮುಖ್ಯಮಂತ್ರಿಗಳೂ ಸಹ ಈ ವಿಚಾರದಲ್ಲಿ ಕೇಂದ್ರಸರ್ಕಾರಕ್ಕೆ ಪತ್ರವನ್ನು ಕೂಡ ಬರೆದಿದ್ದಾರೆ. ನಾನೂ ಸಹ ಇದರ ದಿನನಿತ್ಯ ಸಂಪರ್ಕದಲ್ಲಿದ್ದೇನೆ. ಈ ವರ್ಷಕ್ಕೆ ಇವತ್ತೊ ನಾಳೆಯೋ ಐದು ಕೋಟಿ ರೂಪಾಯಿ ಕೇಂದ್ರ ಸರ್ಕಾರದಿಂದ ಬರತಕ್ಕ ಸಂಭವ ಕೂಡ ಇದೆ. ನಮಗೆ ಕೊಡಲಿಕ್ಕೆ ಎಷ್ಟು ಹಣ ಬೇಕಾಗಿದೆ ಅಷ್ಟು ಕೇಂದ್ರ ಸರ್ಕಾರದಿಂದ ಬಂದರೆ ಕೊಡುತ್ತೇವೆ. ಬರದಿದ್ದರೆ ಹೆಚ್ಚಿಗೆ ತರಿಸುವುದಕ್ಕೆ ಪ್ರಯತ್ನವನ್ನೂ ಕೂಡ ನಡೆಸಿದ್ದೇವೆ ಎನ್ನತಕ್ಕ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತಾ, ತಾರತಮ್ಯ ಮಾಡಿಲ್ಲ ಎನ್ನತಕ್ಕ ಮಾತನ್ನು ಮತ್ತೊಂದು ಸಾರಿ ಹೇಳಲಿಕ್ಕೆ ಇಷ್ಟಪಡುತ್ತೇನೆ.

(೮) ಕೊಟ್ಟೂರು ಕ್ಷೇತ್ರದಲ್ಲಿ ಹೈಸ್ಕೂಲು ಮಂಜೂರಾತಿ.

ಶ್ರೀಮತಿ ಭಾಗೀರಥಮ್ಮ ಮರಳಸಿದ್ದನಗೌಡ (ಕೊಟ್ಟೂರು) :— ಮಾನ್ಯ ಉಪಾಧ್ಯಕ್ಷರೆ, ನಾನು ಹೇಳತಕ್ಕ ವಿಚಾರ ಹೈಸ್ಕೂಲನ್ನು ಮಂಜೂರು ಮಾಡುವಂತಹದ್ದು. ನಾನು ಪಾಸಕಿಯಾದ ನಂತರ ಹೈಸ್ಕೂಲ್ ಅನ್ನು ಸರ್ಕಾರ ಮಂಜೂರು ಮಾಡತಕ್ಕ ದಿನಗಳಲ್ಲಿ ನಾನು ಮಾನ್ಯ ಸಚಿವರನ್ನು ಕಂಡು ನನ್ನ ಕ್ಷೇತ್ರಕ್ಕೆ ಹೈಸ್ಕೂಲ್ ಮಂಜೂರು ಮಾಡಬೇಕೆಂದು ಕೇಳಿಕೊಂಡಿದ್ದೆ. ಆದರೆ ಇದು ನನಗೆ ಲಭ್ಯವಾಗಿಲ್ಲ. ನಂತರ ಮಾನ್ಯ ಸಚಿವರನ್ನು ಕಂಡಾಗ, ಮುಂದಿನ ವರ್ಷ ಕೊಡುವುದಾಗಿ ಅವರು ಭರವಸೆಯನ್ನು ಕೊಟ್ಟರು. ಇದೇ ವಿಚಾರವನ್ನು ನಾನು ನನ್ನ ಕ್ಷೇತ್ರದ ಜನಗಳಿಗೆ ಕೂಡ ಹೇಳಿದ್ದೇನೆ. ಆದರೆ ತಮಗೆ ಗೊತ್ತಿದೆ ಈ ವರ್ಷ ಅದು ಲಭ್ಯವಿಲ್ಲವೆಂದು ನನ್ನ ಕ್ಷೇತ್ರ ಹಿಂದುಳಿದ ಕ್ಷೇತ್ರವಾಗಿದ್ದು, ನಮ್ಮ ಆಸ್ತಿ ಕೇವಲ ವಿದ್ಯೆ ಮಾತ್ರ. ಈ ವರ್ಷದ ಅನುದಾನದಲ್ಲಿ ನನ್ನ ಕ್ಷೇತ್ರಕ್ಕೆ ಹೈಸ್ಕೂಲನ್ನು ಮಂಜೂರು ಮಾಡಿಕೊಡಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರನ್ನು ಗಮನ ಸೆಳೆಯುತ್ತೇನೆ.

ಶ್ರೀ ಸಿ. ಬೈರೇಗೌಡ (ಕೃಷಿ ಸಚಿವರು) :— ಮಾನ್ಯ ಉಪಾಧ್ಯಕ್ಷರೆ, ಪ್ರೌಢಶಾಲೆಗಳನ್ನು ಮಂಜೂರು ಮಾಡತಕ್ಕದ್ದು ಆವಶ್ಯಕತೆ ಮತ್ತು ಹಣದ ಲಭ್ಯತೆಯನ್ನು ಅನುಸರಿಸಿ ಮಂಜೂರು ಮಾಡತಕ್ಕದ್ದು ಸರ್ಕಾರ ಕ್ರಮ. ಆ ರೀತಿಯಾಗಿ ಹಣದ ಲಭ್ಯತೆಯ ಮತ್ತು ಆವಶ್ಯಕತೆಯನ್ನು ಅನುಸರಿಸಿ ಇದರ ಬಗ್ಗೆ ಕ್ರಮವನ್ನು ಸರ್ಕಾರ ತೆಗೆದುಕೊಳ್ಳುತ್ತದೆ ಎನ್ನತಕ್ಕಂಥ ಮಾತನ್ನು ಇಲ್ಲಿ ಹೇಳುವುದಕ್ಕೆ ಬಯಸುತ್ತೇನೆ.

ಬೀದರ್ ಪಟ್ಟಣದಲ್ಲಿ ಆಶ್ರಯ ಸಮಿತಿಯಿಂದ ಮನೆಗಳ ಮಂಜೂರಾತಿ.

ಶ್ರೀ ಸೈಯದ್ ಜುಲ್ಫೀಕರ್ ಹಷ್ಮಿ:— ಸಭಾಧ್ಯಕ್ಷರೇ, ನಮ್ಮ ಬೀದರ್ ಪಟ್ಟಣದಲ್ಲಿ ಆಶ್ರಯ ಮನೆಗಳದ್ದು ಟಾರ್ಗೆಟ್ ಏನು ಕೊಟ್ಟಿದ್ದಾರೆ, ಆ ಪ್ರಕಾರವಾಗಿ ಹಣ ಬಿಡುಗಡೆಯಾಗಿಲ್ಲ. ಈಗ ನಮ್ಮ ಸಮಸ್ಯೆ ಏನಾಗಿದೆ ಎಂದರೆ 7-800 ಟಾರ್ಗೆಟ್ ನಮ್ಮದು. ನಾವು ಮನೆ

ಎಲ್ಲಾ ಗ್ರಾಂಟ್ ಮಾಡಿಬಿಟ್ಟಿದ್ದೇವೆ. ಆ ಜನ ಬೇಸ್‌ಮೆಂಟ್ ಲೆವಲ್‌ವರೆಗೆ ಕನ್‌ಸ್ಟ್ರಕ್ಷನ್ ಪ್ರಾರಂಭ ಮಾಡಿದ್ದಾರೆ. ಆದರೆ ಈಗ ಅವರಿಗೆ ದುಡ್ಡು ಬಿಡುಗಡೆ ಆಗಿಲ್ಲ. ಈಗ ನಾವು ನಮ್ಮ ಕ್ಷೇತ್ರಕ್ಕೆ ಹೋಗುವುದಕ್ಕೆ ಆಗುತ್ತಿಲ್ಲ, ಮತ್ತು ಮನೆಯಲ್ಲಿ ಕೂಡಲಿಕ್ಕೆ ಆಗುತ್ತಿಲ್ಲ. ಅಂಥ ಸಮಸ್ಯೆ ಆಗಿಬಿಟ್ಟಿದೆ. ಸರ್ಕಾರದಿಂದ ಏನು ಉತ್ತರ ಇದೆ ಎಂದು ಹೇಳಬೇಕು.

ಶ್ರೀ ಸಿ. ಬೈರೇಗೌಡ (ಕೃಷಿ ಸಚಿವರು) :— ಮಾನ್ಯ ಉಪಾಧ್ಯಕ್ಷರೇ, ಅವರ ಕ್ಷೇತ್ರಕ್ಕೆ ಹೋಗುವುದಕ್ಕೆ ಆಗದೇ ಇದ್ದರೆ ನಮ್ಮ ಊರಿಗೇ ಬಂದುಬಿಡಲಿ.

ಶ್ರೀ ಸೈಯದ್ ಜುಲ್ಫೀಕರ್ ಹಷ್ಮಿ:— ತಾವು ಇದನ್ನು ಸುಲಭವಾಗಿ ತೆಗೆದುಕೊಳ್ಳಬೇಡಿ. ನಾಲ್ಕು ವರ್ಷಗಳಿಂದ ಹಣ ಬಿಡುಗಡೆಯಾಗಿಲ್ಲ. ತಾವು ಟಾರ್ಗೆಟ್ ಕೊಟ್ಟಿದ್ದೀರಿ. ಆದರೆ ದುಡ್ಡು ಏಕೆ ಬಿಡುಗಡೆ ಮಾಡಿಲ್ಲ? ದುಡ್ಡು ಯಾವಾಗ ಬಿಡುಗಡೆ ಮಾಡುತ್ತೀರಿ ಎಂಬುದನ್ನು ಹೇಳಬೇಕು.

ಶ್ರೀ ಸಿ. ಬೈರೇಗೌಡ :— ಮಾನ್ಯ ಉಪಾಧ್ಯಕ್ಷರೇ, ನಾನು ಆಗಲೇ ಮತ್ತೊಂದು ಪ್ರಶ್ನೆಗೆ ಉತ್ತರ ಹೇಳುತ್ತಾ ಹಣದ ಲಭ್ಯತೆಯನ್ನು ಅನುಸರಿಸಿ- ಇದು ಬರೀ ಅವರ ಕ್ಷೇತ್ರಕ್ಕೆ ಅಲ್ಲ. ರಾಜ್ಯದಾದ್ಯಂತ ಬಿಡುಗಡೆ ಮಾಡತಕ್ಕಂಥಾದ್ದು ಇದೆ. ಟಾರ್ಗೆಟ್‌ಗೆ ಬೇಕಾಗಿರತಕ್ಕಂಥ ಯಾವುದೇ ಕೆಲಸದಲ್ಲಿ ಬಜೆಟ್‌ನಲ್ಲಿ ಇಷ್ಟು ಅಂಶ ಇಟ್ಟಿರುತ್ತಾರೆ. ಅಥವಾ ಒಂದು ತಾಲ್ಲೂಕಿಗೆ, ಅಥವಾ ಒಂದು ಕ್ಷೇತ್ರಕ್ಕೆ ಇಷ್ಟು ಮನೆಗಳನ್ನು ಕೊಡಬೇಕು ಎಂದು ನಾವು ಒಂದು ಗುರಿಯನ್ನು ಇಟ್ಟುಕೊಂಡಿರುತ್ತೇವೆ ಅದರ ಪ್ರಕಾರ ಎಲ್ಲಾ ಮನೆಗಳಿಗೂ ಒಂದೇ ಸಾರಿ ಹಣ ಕೊಡುವುದಕ್ಕೆ ಆಗುವುದಿಲ್ಲ. ಕಂತುಗಳ ಪ್ರಕಾರ ಹಣ ಕೊಡತಕ್ಕಂಥಾದ್ದು, ಅದು ಯಾವುದೇ ಸರ್ಕಾರ ಇದ್ದರೂ ಆ ರೀತಿಯಾಗಿ ಕೊಟ್ಟುಕೊಂಡು ಬಂದಿರತಕ್ಕಂಥಾದ್ದು.ಈಗ ಅವರ ಕ್ಷೇತ್ರಕ್ಕೂ ಕೂಡ ಅಲ್ಲಿ ಏನು ಟಾರ್ಗೆಟ್ ಏನಿದೆ ಅದನ್ನು ಅನುಸರಿಸಿ ಹಣ ಬಿಡುಗಡೆ ಮಾಡತಕ್ಕಂಥಾದ್ದು ಲಭ್ಯತೆ ಆಧಾರದ ಮೇಲೆ ಹಣ ಬಿಡುಗಡೆ ಮಾಡತಕ್ಕಂಥ ಕೆಲಸ ಸರ್ಕಾರ ಮಾಡುತ್ತದೆ ಎನ್ನತಕ್ಕಂಥ ಭರವಸೆಯನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಸೈಯದ್ ಜುಲ್ಫೀಕರ್ ಹಷ್ಮಿ:— 25 ಪರ್ಸೆಂಟ್ ಆದರೂ ಬಿಡುಗಡೆ ಮಾಡಬೇಕಲ್ಲಾ?

ಉಪಾಧ್ಯಕ್ಷರು :— ಕ್ಲಾರಿಫಿಕೇಷನ್ ಇಲ್ಲ. ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಸೈಯದ್ ಜುಲ್ಫೀಕರ್ ಹಷ್ಮಿ:— ಅವರಿಗೆ ಎಲ್ಲಾ ಗೊತ್ತಿದೆ. ಅವರಿಗೆ ತಾವು ಹೇಳಬೇಕು. ಅವರಲ್ಲಿ ಎಲ್ಲಾ ಮಾಹಿತಿ ಇದೆ. ಬಿಡುಗಡೆ ಮಾಡುತ್ತೇವೆ ಅಂತ ಹೇಳಿ ಬಿಡಿ.

(3) ಗಮನ ಸೆಳೆಯುವ ಸೂಚನೆ.